**ದಿನಾಂಕ: 23-02-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಬಿ. ವಕೀಲರಿಂದ**

1. ನನ್ನ ತಂದೆಯವರಿಗೆ ಇಬ್ಬರು ಹೆಂಡತಿಯರು ಅವರುಗಳೆಂದರೆ ಶಿವಲಿಂಗಮ್ಮ ಮತ್ತು ಗಂಗಾಬಾಯಿ. ನನ್ನ ತಂದೆಯ ಮೊದಲನೇ ಹೆಂಡತಿಗೆ 6 ಜನ ಮಕ್ಕಳು ಮತ್ತು ನನ್ನ ತಂದೆಯ 2ನೇ ಹೆಂಡತಿಗೆ ಇಬ್ಬರು ಮಕ್ಕಳು. ದಾವಾ ಜಮೀನು ಮತ್ತು ಇತರೆ ಜಮೀನುಗಳಲ್ಲಿ ನಾವು ಮತ್ತು ನಮ್ಮ ಅಣ್ಣತಮ್ಮಂದಿರು ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಇವೆಲ್ಲಾ ಆಸ್ತಿಗಳು ನಿಮ್ಮ ತಾತನಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ಸ.ನಂ.304 ರಲ್ಲಿನ 17 ಎಕರೆ 36 ಗುಂಟೆ ಜಮೀನಿನಲ್ಲಿ ನಿಮಗೆ ಮತ್ತು ನಿಮ್ಮ ತಮ್ಮನಾದ ನಾಡಗೌಡರವರಿಗೆ ಇಬ್ಬರಿಗೆ ಸಂಬಂಧಪಟ್ಟಂತೆ ಪಾಲಿಗೆ ಬಂದಿದೆ ಎಂದರೆ ಸರಿ. ಸ.ನಂ.304 ರಲ್ಲಿ 17 ಎಕರೆ 36 ಗುಂಟೆ ನನ್ನ ತಮ್ಮನ ಹೆಸರಿನಲ್ಲಿಯೇ ಇದೆ. ಸ.ನಂ.304 ರಲ್ಲಿ ನಾನು ಮತ್ತು ನನ್ನ ತಮ್ಮ (6ನೇ ಪ್ರತಿವಾದಿ) ಇಬ್ಬರು ಹಂಚಿಕೊಂಡಿರುತ್ತೇವೆ. ಸ.ನಂ.293ರಲ್ಲಿ 10 ಎಕರೆ 18 ಗುಂಟೆ ನಮ್ಮ ತಾತನಿಂದ ನಮ್ಮ ಭಾಗಕ್ಕೆ ಬಂದಂತಹ ಆಸ್ತಿ ಎಂದರೆ ಸರಿ. ನಿಮ್ಮ ಕುಟುಂಬಕ್ಕೆ ಸ.ನಂ.293ರಲ್ಲಿ 10 ಎಕರೆ 18 ಗುಂಟೆ ಮತ್ತು ಸ.ನಂ.304 ರಲ್ಲಿ ನಿಮ್ಮ ಪಾಲಿನ 8 ಎಕರೆ 20 ಗುಂಟೆ ಜಮೀನಿನಿಂದ ಬಂದಂತಹ ಆದಾಯದಿಂದ ಕುಟುಂಬ ನಿರ್ವಹಿಸುತ್ತಿದ್ದೀರಿ ಎಂದರೆ ಸರಿ. ಈ 20 ಎಕರೆ ಜಮೀನಿನ ಆದಾಯ ಬಿಟ್ಟು ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ.

2. ಸ.ನಂ.293ರಲ್ಲಿ 10 ಎಕರೆ 18 ಗುಂಟೆ ಜಮೀನನ್ನು ಯಾವ ಕಾರಣಕ್ಕೆ ಮಾರಾಟ ಮಾಡಿದ್ದೀರಿ ಎಂದು ನಿಮ್ಮ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನೀವು ಮಾರಾಟ ಮಾಡಿದ ಖರೀದಿ ಪತ್ರದಲ್ಲಿ ಸಹ ಎಷ್ಟು ಸಾಲ ಇತ್ತು ಎಂದು ಬರೆಸಿಲ್ಲ ಎಂದರೆ ಸರಿ. ಸ.ನಂ.293ರಲ್ಲಿ 10 ಎಕರೆ 18 ಗುಂಟೆ ಜಮೀನನ್ನು ತಲಾ 1 ಎಕರೆಗೆ 4 ಲಕ್ಷ 50 ಸಾವಿರದಂತೆ ಮಾರಾಟ ಮಾಡಿರುತ್ತೇನೆ. ಮಾರಾಟ ಮಾಡಿ ಬಂದಂತಹ

ಹಣದಿಂದ ಸಾಲ ತೀರಿಸಿದ ಬಗ್ಗೆ ಯಾವುದಾದರೂ ದಾಖಲೆ ಇದೆಯೇ ಎಂದರೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ಬ್ಯಾಂಕಿನಲ್ಲಿ 10 ಲಕ್ಷ ಸಾಲ ಈಗಲೂ ಸಹ ಇದೆ. ಸ.ನಂ.293ರಲ್ಲಿನ ಜಮೀನು ಮಾರಾಟ ಆದ ಒಂದು ತಿಂಗಳ ಒಳಗಡೆ ಸ.ನಂ.129/5 ರಲ್ಲಿ 3 ಎಕರೆ 31 ಗುಂಟೆ ನಿಮ್ಮ ಹೆಂಡತಿಯಾದ ಶ್ರೀದೇವಿ ಹೆಸರಿನಲ್ಲಿ ಖರೀದಿ ಮಾಡಿದ್ದೀರಿ ಎಂದರೆ ಅವರ ತಂದೆ ತಾಯಿ ಕೊಡಿಸಿದ್ದಾರೆ ಎಂದು ಉತ್ತರಿಸುತ್ತಾರೆ.

3. 10 ಎಕರೆ 18 ಗುಂಟೆ ಜಮೀನು ದಿನಾಂಕ 28-08-2015 ರಂದು ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಿನಾಂಕ 21-10-2015 ರಂದು ನಿಮ್ಮ ಹೆಂಡತಿ 3 ಎಕರೆ 31 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಆ ಜಮೀನು ಮಾರಿದ್ದಕ್ಕೆ ಮತ್ತು ಈ ಜಮೀನು ಖರೀದಿಗೆ ಯಾವುದೇ ಸಂಬಂಧ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಹೆಂಡತಿ ಶ್ರೀದೇವಿ ಖರೀದಿ ಮಾಡಿದಂತಹ ಖರೀದಿ ಪತ್ರದಲ್ಲಿ ನೀವು ಮತ್ತು ಗೊಲ್ಲಾಳಪ್ಪ ಸಾಕ್ಷಿದಾರರಾಗಿ ಸಹಿ ಮಾಡಿದ್ದೀರಿ ಎಂದರೆ ಸರಿ. 2015 ರಲ್ಲಿ ಮಾರಾಟ ಮಾಡಿ ಬಂದಂತಹ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿಲ್ಲ. 10 ಎಕರೆ 18 ಗುಂಟೆ ಮಾರಾಟ ಮಾಡಿ ಬಂದಂತಹ ಆದಾಯದಿಂದ ಮತ್ತು ನಿಮ್ಮ ಹಿರಿಯರ ಆಸ್ತಿಯಿಂದ ಬಂದಂತಹ ಆದಾಯದಿಂದ ನಿಮ್ಮ ಹೆಂಡತಿ ಹೆಸರಿನಲ್ಲಿ ಸ.ನಂ.129/5 ರ ಜಮೀನನ್ನು ಮತ್ತು ಒಂದು ಮನೆಯನ್ನು ಖರೀದಿ ಮಾಡಿದ್ದೀರಿ ಎಂದರೆ ಸದರಿ ಹಣದಿಂದ ಖರೀದಿ ಮಾಡಿಲ್ಲ ಅವರ ತಂದೆ ತಾಯಿ ಖರೀದಿ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-6 ರಲ್ಲಿ ಸದರಿ ಜಮೀನನ್ನು ನಿಮ್ಮ ಹೆಂಡತಿಯ ತಂದೆ ತಾಯಿ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ಬರೆದಿಲ್ಲ ಎಂದರೆ ಬರೆದಿಲ್ಲ ಅವರ ತಂದೆ ತಾಯಿ ಹೊಲವನ್ನು ಮಾರಾಟ ಮಾಡಿ ನಮಗೆ ಖರೀದಿ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಅತ್ತೆ ಮಾವ ಯಾವ ಹೊಲವನ್ನು ಎಷ್ಟಕ್ಕೆ ಮಾರಾಟ ಮಾಡಿದ್ದಾರೆ ಎಂದು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲೀ ಹಾಗೂ ಪ್ರತಿವಾದಪತ್ರದಲ್ಲಾಗಲೀ ಹೇಳಿಲ್ಲ ಮತ್ತು ಯಾವುದೇ ಕಾಗದಪತ್ರ ಹಾಜರುಪಡಿಸಿಲ್ಲ

ಎಂದರೆ ಹಾಜರುಪಡಿಸಿಲ್ಲ. ಸ.ನಂ.129/5 ರಲ್ಲಿ ಭಾಗ ಕೊಡಬಾರದೆಂಬ ಉದ್ದೇಶದಿಂದ ನಿಮ್ಮ ಹೆಂಡತಿಯ ತಂದೆ ತಾಯಿ ಕೊಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. 10 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡಲು ನಿಮ್ಮ ಕುಟುಂಬಕ್ಕೆ ಮತ್ತು ನಿಮಗೆ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ನಿಮ್ಮ ಮೊದಲನೆ ಹೆಂಡತಿ ಮಗಳು ಎಂದರೆ ಸರಿ. ನನ್ನ ಮೊದಲನೇ ಹೆಂಡತಿಯ ಹೆಸರು ಲಕ್ಷ್ಮೀಬಾಯಿ ಇರುತ್ತದೆ ನನ್ನ 2ನೇ ಹೆಂಡತಿಯ ಹೆಸರು ಕಲಾವತಿ ಇರುತ್ತದೆ 3ನೇ ಹೆಂಡತಿಯ ಹೆಸರು ಶ್ರೀದೇವಿ ಇರುತ್ತದೆ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ 10 ಎಕರೆ 18 ಗುಂಟೆ ಜಮೀನನ್ನು ಗೊಲ್ಲಾಳಪ್ಪಗೆ ಮಾರಾಟ ಮಾಡಿದ್ದೀರಿ ಎಂದರೆ ಮಾರಾಟ ಮಾಡಿದ್ದು ಆಗಿದೆ ನನ್ನ ಹೆಸರಿಗೆ ಎಷ್ಟು ಇದೆ ನನ್ನ ಮೂರು ಜನ ಮಕ್ಕಳಿಗೆ ಕೊಡುತ್ತೇನೆ ಎಂದು ಉತ್ತರಿಸುತ್ತಾರೆ. ನಮ್ಮ ಹಿರಿಯರಿಂದ ಬಂದಂತಹ ಯಾವುದೇ ಮನೆಗಳು ಇಲ್ಲ. ದಾವಾದ ಐಟಂ ನಂ.6 ಮತ್ತು 7 ಹಿರಿಯರ ಆಸ್ತಿ ಎಂದರೆ ತಂದೆ ಆಸ್ತಿ ಅಲ್ಲ ಎಂದು ಉತ್ತರಿಸುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ